ವಿಜಯ ಕರ್ನಾಟಕ

Friday, September 30, 2011

# ಜನಲೋಕಪಾಲ ವ್ಯವಸ್ಥಿತ ಆಚರಣೆಯೂ ಬೇಕು

• ವಿಕ ಸುದ್ದಿಲೋಕ ಬೆಂಗಳೂರು

ಭ್ರಷ್ಟಾಚಾರ ನಿರ್ಮೂಲನೆಗೆ ಜನಲೋಕಪಾಲ ವಿಧೇಯಕ ಜಾರಿಗೆ ಬಂದರೆ ಮಾತ್ರ ಸಾಲದು, ಅದರ ವ್ಯವಸ್ಥಿತ ಆಚರಣೆಯೂ ಆಗಬೇಕು ಎಂದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ತಿಳಿಸಿದ್ದಾರೆ.

ಜೈನ್ ವಿಶ್ವವಿದ್ಯಾಲಯದ ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಆಯೋಜಿಸಿದ್ದ ಅಂತರ್ ಕಾಲೇಜು ಅರ್ಥಶಾಸ್ತ್ರ ಉತ್ಸವವನ್ನು ಉದ್ಘಾಟಿಸಿ ವಿದ್ಯಾರ್ಥಿಗಳೊಂದಿಗೆ ನಡೆದ ಸಂವಾದದಲ್ಲಿ ಗುರುವಾರ ಮಾತನಾಡಿದರು.

ಜನಲೋಕಪಾಲ ವಿಧೇಯಕದಲ್ಲಿ ಸಾಕಷ್ಟು ಉತ್ತಮ ಅಂಶಗಳಿವೆ. ಅವೆಲ್ಲವೂ ಯಥಾವತ್ ಜಾರಿಗೆ ಬಂದರೆ ಸಾಕಷ್ಟು ಅನುಕೂಲ ಆಗಲಿದೆ. ಈಗಿರುವ ಕರಡು ರೂಪವನ್ನೇ ಒತ್ತಡ ಹೇರಿಯಾದರೂ ಸರಿ ಜಾರಿಗೆ ತರಿಸಲೇಬೇಕಿದೆ ಎಂದರು.

ಅಣ್ಣಾ ಹಜಾರೆಗೆ ಬೆಂಬಲಿಸಿದ ರೀತಿ ಇಡೀ ವಿಶ್ವಕ್ಕೆ ಭಾರತದ ಯುವ ಶಕ್ತಿ ಮಾದರಿಯಾಗಿದೆ. ರಕ್ತ ರಹಿತ ಕ್ರಾಂತಿ ಮೂಲಕ ಮಹತ್ವದ ಯಶಸ್ಸು ದೊರಕಿಸಿಕೊಟ್ಟ ಯುವ ಶಕ್ತಿಗೆ ಮೀರಿದ್ದು ಯಾವುದೂ ಇಲ್ಲ. ದೇಶದಲ್ಲಿ ಭ್ರಷ್ಟಾಚಾರ ಮುಗಿಲು ಮುಟ್ಟಿದ್ದು, ಇದನ್ನು ತಡೆಯುವ ಶಕ್ತಿ ಇರುವುದು ಯುವಕರಿಗೆ ಮಾತ್ರ ಎಂದು ವಿವರಿಸಿದರು.

ಯುವಕರಲ್ಲಿ ಭ್ರಷ್ಟಾಚಾರ ನಿರ್ಮೂಲನೆ ಕುರಿತು ಜಾಗೃತಿ ಜತೆ ಅರ್ಥಶಾಸ್ತ್ರದ ಅರಿವೂ ಮುಖ್ಯ. ಸಮರ್ಥವಾಗಿ ಅರ್ಥ ವ್ಯವಸ್ಥೆ ಕಾಪಾಡುವ ಹೊಣೆ ನಿಮ್ಮ ಮೇಲಿದೆ. ಈ ನಿಟ್ಟಿನಲ್ಲಿ ಮೇಳಗಳು ಸಹಕಾರಿ. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಮೇಳದಲ್ಲಿ ಪಾಲ್ಗೊಳ್ಳಬೇಕೆಂದು ಹೇಳಿದರು.

ವಿಕ ಚಿತ್ರಲೋಕ



ಜೈನ್ ವಿಶ್ವವಿದ್ಯಾಲಯದ ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಆಯೋಜಿಸಿದ್ದ ಅಂತರ್ ಕಾಲೇಜು ಅರ್ಥಶಾಸ್ತ್ರ ಉತ್ಸವವನ್ನು ಗುರುವಾರ ಉದ್ಘಾಟಿಸಿದ ಲೋಕಾಯುಕ್ತ ನಿವೃತ್ತ ನ್ಯಾ. ಎನ್. ಸಂತೋಷ್ ಹೆಗ್ಡೆ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.